

بِسْمِ اللهِ الرَّحْمَنِ الرَّحِيم

# ಪವಿತ್ರ ಖುರ್‌ಆನಿನ ಉಪದೇಶಗಳು ಮನುಷ್ಯನನ್ನು ತಕ್ಕುದ ಉನ್ನತ ಪದವಿಗಳಿಗೆ ತಲಪಿಸುತ್ತವೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಸ್ವೀಡನಿನ **'ನಾಸಿರ್'** ಮಸೀದಿಯಲ್ಲಿ **20–05–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಕೆಳಗಿನ ಖುರ್‌ಆನ್ ವಚನ ತಿಲಾವತ್ ಮಾಡಿದರು:*

يَاأَيُّهَا الَّذِينَ آمَنُوا لاَ تَتَّبِعُوا خُطُوَاتِ الشَّيْطَانِ وَمَنْ يَتَّبِعْ خُطُوَاتِ الشَّيْطَانِ فَإِنَّهُ يَأْمُرُ بِالْفَحْشَاءِ وَالْمُنْكَرِ وَلَوْلاَ فَضْلُ اللَّهِ عَلَيْكُمْ وَرَحْمَتُهُ مَا زَكَا مِنْكُمْ مِنْ أَحَدٍ أَبَدًا وَلَكِنَّ اللَّهَ يُزَكِّي مَنْ يَشَاءُ وَاللَّهُ سَمِيعٌ عَلِيمٌ

ಓ ವಿಶ್ವಾಸಿಗಳೇ, ಶೈತಾನನ ಹೆಜ್ಜೆಗಳನ್ನು ನೀವು ಅನುಗಮಿಸಬೇಡಿರಿ. ಶೈತಾನನ ಹೆಜ್ಜೆಗಳನ್ನು ಅನುಗಮಿಸುವವರು ತಿಳಿದುಕೊಳ್ಳಲಿ ಖಂಡಿತವಾಗಿಯೂ ಅವನು (ಶೈತಾನನು) ಅಶ್ಲೀಲತೆಯನ್ನೂ ಕೆಡುಕನ್ನೂ ಆದೇಶಿಸುತ್ತಾನೆ. ಅಲ್ಲಾಹನ ಅನುಗ್ರಹ ಮತ್ತು ಅವನ ಕರುಣೆ ನಿಮ್ಮ ಮೇಲೆ ಇಲ್ಲದಿರುತ್ತಿದ್ದರೆ ನಿಮ್ಮ ಪೈಕಿ ಯಾರೊಬ್ಬನೂ ಎಂದಿಗೂ ಪರಿಶುದ್ಧನಾಗುತ್ತಿರಲಿಲ್ಲ. ಆದರೆ, ಅಲ್ಲಾಹನು ತಾನಿಚ್ಛಿಸುವವರನ್ನು ಪರಿಶುದ್ಧರನ್ನಾಗಿ ಮಾಡುತ್ತಾನೆ. ಅಲ್ಲಾಹನು ಬಹಳ ಆಲಿಸುವವನೂ ಸರ್ವಜ್ಞನೂ ಆಗಿದ್ದಾನೆ. (ಪವಿತ್ರ ಖುರ್‌ಆನ್ 24:22).

ಅಲ್ಲಾಹನು ಪವಿತ್ರ ಖುರ್‌ಆನಿನ ಈ ವಚನದಲ್ಲಿ, ಮತ್ತು ಇತರ ವಚನಗಳಲ್ಲೂ ಶೈತಾನನಿಂದ ರಕ್ಷಿಸಿಕೊಳ್ಳುವ ಬಗ್ಗೆ, ಅವನ ಹೆಜ್ಜೆಗಳನ್ನು ಅನುಗಮಿಸದಿರುವ ಬಗ್ಗೆ ಮಾರ್ಗದರ್ಶನ ನೀಡುತ್ತಾ ಎಚ್ಚರಿಕೆ ನೀಡಿರುವನು. ಅಲ್ಲಹನು ಈ ಆಜ್ಞೆ ನೀಡಿರುವುದು ಏಕೆಂದರೆ ಶೈತಾನನು ಅಲ್ಲಾಹನಿಗೆ ಅವಿಧೇಯನಾಗಿದ್ದಾನೆ. ಅವನು ಅಲ್ಲಾಹನ ಆಜ್ಞೆಗಳಿಗೆ ವಿರುದ್ಧವಾಗಿ ವರ್ತಿಸುತ್ತಾನೆ. ಅವನು ಅವುಗಳ ವಿರುದ್ಧ ವಿದ್ರೋಹಕರವಾಗಿ ವರ್ತಿಸುತ್ತಾನೆ. ಅಲ್ಲಾಹನಿಗೆ ಅವಿಧೇಯನಾಗಿರುವವನು, ಅಲ್ಲಾಹನ ಆಜ್ಞೆಗಳಿಗೆ ವಿರುದ್ಧವಾಗಿ ವರ್ತಿಸುವವನು ತನ್ನ ಹಿಂಗಾಮಿಗಳಿಗೆ ಸಹ ತಾನು ಮಾಡುವುದನ್ನೇ ಕಲಿಸುವನು ಎನ್ನುವುದು ಸ್ಪಷ್ಟವಾದ ಸಂಗತಿಯಾಗಿದೆ. ಇದರ ಪರಿಣಾಮ ಏನಾಗುವುದೆಂದರೆ ಶೈತಾನ್ ಸ್ವತಃ ನರಕದ ಇಂಧನವಾಗಿರುವನು. ಅವನು ತನ್ನ ಹಿಂಬಾಲಕರನ್ನು ಸಹ ನರಕದ ಇಂಧನವಾಗಿ ಮಾಡುವನು. ಇದನ್ನೆಲ್ಲಾ ಸ್ಪಷ್ಟವಾಗಿ ವಿವರಿಸಿದ ನಂತರ ಅಲ್ಲಾಹನು ಹೇಳುತ್ತಾನೆ: ಏನು, ಮನುಷ್ಯರಿಗೆ ಶೈತಾನನು ನಿಮ್ಮ ಬಹಿರಂಗ ಶತ್ರುವಾಗಿದ್ದಾನೆ ಎಂಬ ವಿಷಯ ಇನ್ನೂ ಮನವರಿಕೆ ಆಗಿಲ್ಲವೇ? ಆದುದರಿಂದ ಈ ಶತ್ರುವಿನಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಒಂದು ವಿಭಾಗದ ಜನರು ಹೇಗಿದ್ದಾರೆಂದರೆ ಅವರಿಗೆ ಧರ್ಮದ ಬಗ್ಗೆ ಯಾವ ಲಕ್ಷ್ಯವೂ ಇಲ್ಲ. ನರಕವೆಂದರೇನು ಸ್ವರ್ಗವೆಂದರೇನು ಎನ್ನುವುದರ ಬಗ್ಗೆ ಅವರಿಗೆ ತಿಳಿದಿಲ್ಲ. ಅವರಿಗೆ ಅಲ್ಲಾಹನ ಅಸ್ತಿತ್ವದ ಬಗ್ಗೆ ದೃಢವಿಶ್ವಾಸವಿಲ್ಲ. ಅವರು ಧಾರ್ಮಿಕ ವಿಷಯಗಳನ್ನು ಮನವರಿಕೆ ಮಾಡುವುದಿಲ್ಲ. ಮನವರಿಕೆ ಮಾಡುವ ಇಚ್ಛೆಯೂ ಅವರಿಗೆ ಇರುವುದಿಲ್ಲ. ಇಂತಹ ಜನರು ಶೈತಾನನ ಹಿಂದೆ ಚಲಿಸುವವರೇ ಆಗಿದ್ದಾರೆ. ಆದರೆ ಬೇರೆ ಒಂದು ವಿಭಾಗದ ಜನರು ಸತ್ಯವಿಶ್ವಾಸಿಗಳೆಂದು ವಾದಿಸುತ್ತಾರಾದರೂ ಶೈತಾನನ ಹಿಂದೆ ಚಲಿಸುವವರಾಗಿದ್ದಾರೆ. ಅಥವಾ ಪ್ರಜ್ಞೆಯಿಲ್ಲದೆ ಕೆಲವು ಕೆಲಸಗಳನ್ನು ಮಾಡಿ ಅಥವಾ ಅಲ್ಲಾಹನಿಗೆ ಸೇರಿದವರಾಗಲೂ ಪರಿಪೂರ್ಣ ಪ್ರಯತ್ನ ಮಾಡದೆ ಶೈತಾನನ ಹೆಜ್ಜೆಗಳನ್ನು ಅನುಗಮಿಸುವವರಾಗುತ್ತಾರೆ. ಅಥವಾ ಅವರು ಹಾಗೆ ಹೆಜ್ಜೆ ಹಾಕುವವರಾಗಲು ಸಾಧ್ಯವಿದೆ. ಆದುದರಿಂದ ಅಲ್ಲಾಹನು ಪವಿತ್ರ ಖುರ್‌ಆನಿನ ಈ ವಚನದಲ್ಲಿ ಸತ್ಯವಿಶ್ವಾಸಿಗಳಿಗೆ ಎಚ್ಚರಿಕೆ ನೀಡುತ್ತಿದ್ದಾನೆ. ಶೈತಾನನ ಹೆಜ್ಜೆಗಳಿಗೆ ಹೆಜ್ಜೆ ಹಾಕಿ ನಡೆಯಬಾರದೆಂದು ಅವರೊಂದಿಗೆ ಹೇಳುತ್ತಿದ್ದಾನೆ. ಸತ್ಯವಿಶ್ವಾಸಿಗಳಿಗೆ ಈ ರೀತಿ ಎಚ್ಚರಿಕೆ ನೀಡಲಾಗಿದೆ: ನಾವು ಸತ್ಯವಿಶ್ವಾಸಿಗಳಾಗಿದ್ದೇವೆ ನಾವು ಇಸ್ಲಾಮ್ ಧರ್ಮಕ್ಕೆ ಸೇರಿದ್ದೇವೆ ಆದುದರಿಂದ ನಮಗೆ ಚಿಂತೆ ಏನೂ ಇಲ್ಲ ಎಂದು ಭಾವಿಸಬೇಡಿರಿ. ನೀವು ಸತ್ಯವಿಶ್ವಾಸಿಗಳಾಗಿದ್ದರೂ ಆಗ ಸಹ ಶೈತಾನನ ಅಪಾಯ ಅದೇ ರೀತಿ ಇದೆ. ಒಬ್ಬ ಸತ್ಯವಿಶ್ವಾಸಿ ಸಹ ಶೈತಾನನ ಮುಷ್ಠಿಯಲ್ಲಿ ಹಿಡಿತಕ್ಕೊಳಗಾಗಬಹುದಾಗಿದೆ, ಒಬ್ಬ ಅವಿಶ್ವಾಸಿ ಹಿಡಿಗೂಡಲ್ಪಡುವ ರೀತಿಯಲ್ಲಿಯೇ. ಆದುದರಿಂದ ಪ್ರತಿಯೊಬ್ಬ ಸತ್ಯವಿಶ್ವಾಸಿಯ ಕಡ್ಡಾಯ ಕರ್ತವ್ಯ ಏನೆಂದರೆ ಶೈತಾನನ ಆಕ್ರಮಣಗಳಿಂದ ರಕ್ಷಿಸಿಕೊಳ್ಳಲು ಅಲ್ಲಾಹನನ್ನು ಯಾವಾಗಲೂ ನೆನಪಿಸುತ್ತಾ ಇರಬೇಕು. ನಾವು ಇಂದಿನ ಕಾಲದಲ್ಲಿ ಲೋಕದಲ್ಲಿ ಇದನ್ನೇ ಕಾಣುತ್ತಿದ್ದೇವೆ. ಸತ್ಯವಿಶ್ವಾಸ ಹೊಂದಿರುವುದಾಗಿ ವಾದಿಸುವವರು ಸಹ ಶೈತಾನನ ಹಿಂದೆ ನಡೆಯುತ್ತಿದ್ದಾರೆ. ಉದಾಹರಣೆಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಮುನ್ನೆಚ್ಚರಿಕೆ ನೀಡಿರುವನು. ಯಾರು ಒಬ್ಬ ಸತ್ಯವಿಶ್ವಾಸಿಯನ್ನು ಪ್ರಜ್ಞಾ ಪೂರ್ವಕವಾಗಿ ಹತ್ಯೆ ಮಾಡುತ್ತಾನೋ ಅವನಿಗಿರುವ ಶಿಕ್ಷೆ ನರಕವಾಗಿದೆ ಎಂದು. ಇಂದಿನ ಕಾಲದಲ್ಲಿ ಮುಸ್ಲಿಮ್ ಲೋಕದಲ್ಲಿ ನಡೆಯುತ್ತಿರುವುದಾದರೂ ಏನು? ಒಬ್ಬರಿನ್ನೊಬ್ಬರನ್ನು ಮುಸ್ಲಿಮರು ಹತ್ಯೆ ಮಾಡಿ ಶೈತಾನನ ಹಿಂದೆ ನಡೆಯುತ್ತಿದ್ದಾರೆ. ಕೆಲವು ಉಗ್ರವಾದಿ ಗುಂಪುಗಳು ನಿಷ್ಕಾರಣವಾಗಿ ಸಾಮೂಹಿಕ ಹತ್ಯೆಯನ್ನು ಮಾಡುತ್ತಿದ್ದಾರೆ. ಇವೆಲ್ಲಾ ಶೈತಾನನ ಕೆಲಸಗಳಾಗಿವೆ ಮತ್ತು ನರಕದ ಕಡೆಗೆ ಒಯ್ಯುವವುಗಳು ಆಗಿವೆ. ಈ ಜನರು ಶೈತಾನನಿಂದ ಮೋಸಗೊಳಿಸಲ್ಪಟ್ಟು ಸ್ವರ್ಗಕ್ಕೆ ಹೋಗುವ ಹೆಸರಲ್ಲಿ ಈ ಎಲ್ಲ ಕೃತ್ಯಗಳನ್ನು ಮಾಡುತ್ತಾರೆ. ಶೈತಾನನು ಅವರೊಂದಿಗೆ ಹೇಳುತ್ತಾನೆ: ನೀವು ಈ ಕೆಲಸ ಮಾಡಿದರೆ ಸ್ವರ್ಗಕ್ಕೆ ಹೋಗುವಿರಿ ಎಂದು. ಆದರೆ ಅಲ್ಲಾಹನು ಹೇಳುವುದೇನೆಂದರೆ ನೀವು ಈ ಕೆಲಸ ಮಾಡಿದರೆ ಸ್ವರ್ಗಕ್ಕೆ ಹೋಗಲಾರಿರಿ ಬದಲಾಗಿ ನರಕಕ್ಕೆ ಹೋಗುವಿರಿ ಎಂದು. ಏಕೆಂದರೆ ನೀವು ಶೈತಾನನ ಹಿಂದೆ ನಡೆಯುತ್ತಿರುವಿರಿ.

ಭೀಕರ ಕೃತ್ಯ ನಡೆಸುವವರು ಮತ್ತು ಹತ್ಯೆ ಮಾಡುವವರು ಮಾತ್ರ ಶೈತಾನನ ಹಿಂದೆ ನಡೆಯುವವರಲ್ಲ. ಮನುಷ್ಯನು ಯಾವಾಗ ಯಾವುದಾದರೊಂದು ಚಿಕ್ಕದಾದ ದೇವಾಜ್ಞೆಯಿಂದಾದರೂ ದೂರ ಸರಿಯುತ್ತಾನೋ ಆಗ ಅವನು ಶೈತಾನನ ಕಡೆಗೆ ಸಾಗುವವನಾಗುತ್ತಾನೆ. ಆದುದರಿಂದ ಬಹಳ ಜಾಗರೂಕತೆ ವಹಿಸುವುದು ಆವಶ್ಯಕವಾಗಿದೆ. ಶೈತಾನನು ದಾರಿತಪ್ಪಿಸುವಾಗ ಮತ್ತು ಕೆಟ್ಟ ಕೆಲಸ ಮಾಡಲು ಪ್ರೇರೇಪಣೆ ನೀಡುವಾಗ ಅಲ್ಲಾಹನ ಆಜ್ಞೆಗಳಿಗೆ ಅವಿಧೇಯರಾಗುವ ಕಡೆಗೆ ಕರೆದುಕೊಂಡು ಹೋಗುತ್ತಾನೆ. ಶೈತಾನನು ಬಹಿರಂಗವಾಗಿ ಅಲ್ಲಾಹನಿಂದ ದೂರ ಸರಿಯಿರಿ ಅಥವಾ ಕೆಟ್ಟ ಕೆಲಸ ಮಾಡಿರಿ ಎಂದು ಹೇಳುವುದಿಲ್ಲ. ಅವನು ಒಳಿತಿನ ನೆವನದಲ್ಲಿ ಕೆಡುಕಿನ ಕಡೆಗೆ

ಕರೆದುಕೊಂಡು ಹೋಗುತ್ತಾನೆ. ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನ ಮನುಷ್ಯನು ಶೈತಾನನ ಹೆಜ್ಜೆಗೆ ಹೆಜ್ಜೆ ಹಾಕಿ ನಡೆಯುವಾಗ ಕೆಟ್ಟ ಕೆಲಸಗಳು ಹೇಗೆ ಹಬ್ಬುತ್ತವೆ ಮತ್ತು ಕೆಡುಕು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹಬ್ಬಿ ಯಾವ ರೀತಿ ವಿಶಾಲ ಪ್ರದೇಶವನ್ನು ಆವರಿಸುತ್ತದೆ ಎಂಬುದರ ಬಗ್ಗೆ ಪ್ರಕಾಶ ಬೀರುತ್ತದೆ. ಶೈತಾನನ ಒಂದು ಹೆಜ್ಜೆಯ ಮೇಲೆ ಕಾಲಿಟ್ಟ ನಂತರ ಇನ್ನೊಂದು ಹೆಜ್ಜೆಗೆ ಕಾಲಿಡುವಾಗ ಅದರ ಅರ್ಥ ಅವನು ಕೆಡುಕನ್ನು ಹರಡುತ್ತಾ ಇರುತ್ತಾನೆ ಎಂದಾಗಿದೆ.

ಈ ಸಮಾಜದಲ್ಲಿ ಪರದೆಯ ವಿರುದ್ಧ ಬಹಳ ಹೇಳಲಾಗುತ್ತದೆ. ಕೆಲವರ ಅಭಿಪ್ರಾಯ ಪ್ರಕಾರ ಪರದೆ ಧರಿಸದಿರುವುದು ಕೆಟ್ಟದೇನೂ ಅಲ್ಲ. ಆದುದರಿಂದ ಅದರ ಬಗ್ಗೆ ಶರೀಅತ್‌ನಲ್ಲಿ ಆಜ್ಞೆ ಇರಬೇಕಾಗಿರಲಿಲ್ಲ ಎಂದು ಹೇಳುತ್ತಾರೆ. ಕೆಲವು ಯುವತಿಯರು ಅನ್ಯರು ಏನು ಹೇಳುತ್ತಾರೆಂಬ ಕೀಳರಿಮೆ ಹೊಂದಿ ಪರದೆ ಧರಿಸುವ ಬಗ್ಗೆ ಸಡಿಲ ಮನೋಭಾವ ಹೊಂದಿರುತ್ತಾರೆ. ಆದರೆ ಪರದೆಯನ್ನು ಕಳಚಿ ಹಾಕುವ ಹುಡುಗಿ ಮತ್ತು ಮಹಿಳೆಗೆ, ಇದೊಂದು ಪವಿತ್ರ ಖುರ್‌ಆನ್‌ನಲ್ಲಿ ನೀಡಲ್ಪಟ್ಟ ಆಜ್ಞೆಯಾಗಿದೆ ಎನ್ನುವುದರ ಬಗ್ಗೆ ಯೋಚನೆ ಇರುವುದಿಲ್ಲ. ತಂದೆ ತಾಯಂದಿರು ಚಿಕ್ಕಂದಿನಿಂದಲೇ ಹೆಣ್ಣು ಮಕ್ಕಳಲ್ಲಿ ಪರದೆ ಬಗ್ಗೆ ಭಾವನೆಗಳನ್ನು ಉಂಟುಮಾಡಬೇಕು. ನೀವು ಇಸ್ಲಾಮೀ ಆಜ್ಞೆಗಳನ್ನು ಪಾಲಿಸುವ ಬಗ್ಗೆ ನಾಚಿಕೆ ಪಡಬಾರದು. ಇಸ್ಲಾಮಿನ ಆಜ್ಞೆಗಳನ್ನು ಪಾಲಿಸದಿರುವ ಬಗ್ಗೆ ನಾಚಿಕೆ ಪಡಬೇಕಾಗಿದೆ ಎಂದು ಹೇಳಬೇಕು. ಇದೇ ರೀತಿ ಹುಡುಗರಲ್ಲಿ ಸಹ ಸಮಾಜದ ಸ್ವತಂತ್ರ ವಾತಾವರಣದ ಕಾರಣ ಕೆಲವು ಕೆಡುಕುಗಳು ಪ್ರಾರಂಭವಾಗಲು ತೊಡಗಿವೆ. ಅವರು ಅದರಲ್ಲಿ ಸೇರಿಕೊಳ್ಳುತ್ತಾರೆ. ಆದುದರಿಂದ ಶೈತಾನನ ಆಕ್ರಮಣಗಳಿಂದ ರಕ್ಷಣೆ ಪಡೆಯಲು ಮನೆಯಿಂದಲೇ ಎಂತಹ ರಕ್ಷಣೆಯ ವ್ಯವಸ್ಥೆ ರೂಪಿಸಬೇಕಾಗಿದೆ ಎಂದರೆ ಪ್ರತಿಯೊಂದು ರೀತಿಯ ಶೈತಾನೀ ಆಕ್ರಮಣದಿಂದ ಸುರಕ್ಷಿತರಾಗಿರಬೇಕಾಗಿದೆ. ಮಾತ್ರವಲ್ಲ ಅದಕ್ಕೆ ಉತ್ತರ ಸಹ ಕೊಡಬೇಕಾಗಿದೆ. ಶೈತಾನನ ಪ್ರೇಮವನ್ನು ವಾಸ್ತವಿಕ ಪ್ರೇಮ ಎಂದು ಭಾವಿಸಿ ಜೀವಿತದಲ್ಲಿ ಪ್ರವೇಶಗೊಳಿಸಬಾರದು. ಪ್ರತಿ ಸಮಯದಲ್ಲಿ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ ಅಲ್ಲಾಹನ ಆಶ್ರಯದಲ್ಲಿ ಪ್ರವೇಶಿಸಲು ಪ್ರತಿಯೊಬ್ಬ ಅಹ್ಮದಿ ಪ್ರಯತ್ನಿಸಬೇಕು. ಶೈತಾನನಿಂದ ರಕ್ಷಣೆ ಪಡೆಯಲು ಇರುವ ಆಶ್ರಯದಾಮ ಅಲ್ಲಾಹನೇ ಆಗಿದ್ದಾನೆ. ಅಲ್ಲಾಹನ ಆಶ್ರಯ ಪಡೆಯಲಿರುವ ಮಾರ್ಗ ಇಸ್ತಿಗ್‌ಫಾರ್ ಪ್ರಾರ್ಥನೆಯಾಗಿದೆ. ಯಾವುದೇ ಮನುಷ್ಯ ತಿಳಿದೂ ತಿಳಿದೂ ಯಾವುದಾದರೂ ಕೆಡುಕಿನ ಕಡೆಗೆ ಹೋಗುವುದಿಲ್ಲ. ಶೈತಾನನು ಒಳಿತಿನ ದುರಾಶೆಯನ್ನು ತೋರಿಸಿ ಮನುಷ್ಯನನ್ನು ಹೊರಗೆಳೆಯುತ್ತಾನೆ. ಅಥವಾ ಒಳಿತಿನ ಆಶೆ ಹುಟ್ಟಿಸಿ ಒಬ್ಬ ಸತ್ಯವಿಶ್ವಾಸಿಯನ್ನು ಅಲ್ಲಾಹನ ಆಶ್ರಯದಿಂದ ಹೊರಗೆ ತರುತ್ತಾನೆ. ಆದುದರಿಂದ ಈ ಸಮಾಜ ವ್ಯವಸ್ಥೆಯಲ್ಲಿ ಅಹ್ಮದಿಯರು ವಿಶಿಷ್ಟವಾಗಿ ಜಾಗರೂಕರಾಗಬೇಕಾದುದು ಆವಶ್ಯಕವಾಗಿದೆ. ಇಲ್ಲಿ ಹುಡುಗ ಹುಡುಗಿಯರು ಸ್ವತಂತ್ರರಾಗಿ ಭೇಟಿಯಾಗುವುದು ಅಥವಾ ಏಕಾಂತದಲ್ಲಿ ಭೇಟಿಯಾಗುವುದು ನಾಚಿಕೆಗೇಡು ಎಂಬ ಭಾವನೆಯೇ ಇಲ್ಲವಾಗಿದೆ. ಕೇವಲ ಅವಿವೇಕಿ ಯುವಕ ಯುವತಿಯರಿಂದ ಮಾತ್ರ ಕೆಡುಕುಗಳು ಹಬ್ಬುವುದಲ್ಲ. ವಿವಾಹಿತರಾದವರಲ್ಲಿ ಸಹ ಸ್ವಾತಂತ್ರ್ಯ ಮತ್ತು ಸ್ನೇಹ ಸಂಬಂಧಗಳ ಹೆಸರಲ್ಲಿ ಮನೆಗಳಿಗೆ ಹೋಗುತ್ತಾ ಬರುತ್ತಾ ಇರುವುದರಿಂದಲೂ ಸಹ ಸಮಸ್ಯೆಗಳು ತಲೆ ದೋರುತ್ತವೆ. ಕುಟುಂಬಗಳು ಹಾಳುಗೆಡವಲ್ಪಡುತ್ತವೆ.

ಕೆಡುಕುಗಳಲ್ಲಿ ಇಂದಿನ ಕಾಲದಲ್ಲಿ ಟಿ.ವಿ. ಮತ್ತು ಇಂಟರ್‌ನೆಟ್‌ಗಳಿವೆ. ಬಹುತೇಕ ಮನೆಗಳನ್ನು ಪರಿಶೋಧಿಸಿದಾಗ ತಿಳಿದು ಬಂದುದೇನೆಂದರೆ ಚಿಕ್ಕವರೂ ದೊಡ್ಡವರೂ ಸುಬ್‌ಹ್ ನಮಾಝ್ ನಿಗದಿತ ಸಮಯದಲ್ಲಿ ಅನುಷ್ಠಿಸುವುದಿಲ್ಲ. ಅವರು ರಾತ್ರಿ ಬಹಳ ಹೊತ್ತು ಟಿ.ವಿ. ನೋಡುತ್ತಾ ಇರುತ್ತಾರೆ. ಅಥವಾ ಇಂಟರ್‌ನೆಟ್ ನೋಡುತ್ತಾ ಇರುತ್ತಾರೆ. ಈ ಕಾರಣದಿಂದ ಬೆಳಗ್ಗೆ ಬೇಗನೆ ಎದ್ದೇಳುವುದಿಲ್ಲ. ಅಂತಹ ಜನರು ಬೆಳಗ್ಗಿನ ನಮಾಝ್‌ಗೋಸ್ಕರ ಎದ್ದೇಳಬೇಕು ಎಂಬ ಭಾವನೆಯನ್ನೇ ಹೊಂದಿರುವುದಿಲ್ಲ. ಟಿ.ವಿ. ಮತ್ತು ಇಂಟರ್‌ನೆಟ್ ಮತ್ತು ಇಂತಹ ಅನಾವಶ್ಯಕ ವಸ್ತುಗಳು ನಿಮ್ಮ ನಮಾಝ್‌ಗಳನ್ನು ಯಾವಾಗಲಾದರೊಮ್ಮೆ ನಾಶ ಮಾಡುವಂತಹದ್ದಲ್ಲ. ಅವುಗಳನ್ನು ನೋಡುವ ಅಭ್ಯಾಸ ಮಾಡಿಕೊಂಡರೆ ಪ್ರತಿದಿನ ರಾತ್ರಿ ಬಹಳ ಹೊತ್ತು ಟಿ.ವಿ.ಯ ವಿವಿಧ ಕಾರ್ಯಕ್ರಮಗಳನ್ನು ಮತ್ತು ಇಂಟರ್‌ನೆಟ್ ನೋಡುತ್ತಾ ಬೆಳಗ್ಗಿನ ನಮಾಝಿಗೆ ಎದ್ದೇಳಲು ಕಷ್ಟಕರವಾಗುತ್ತದೆ. ಅಂತಹ ಜನರು ನಮಾಝ್ ಮಾಡಲು ಏಳುವುದೇ ಇಲ್ಲ. ಕೆಲವು ಜನರು ನಮಾಝ್‌ಗೆ ಮಹತ್ವವನ್ನೇ ಕೊಡುವುದಿಲ್ಲ.

ನಮಾಝ್ ಎಂಬುದು ಅತಿ ಪ್ರಧಾನವಾದ ಆರಾಧನೆಯಾಗಿದೆ. ಅದರ ಅನುಷ್ಠಾನ ಪ್ರತಿಯೊಂದು ಸ್ಥಿತಿಯಲ್ಲಿಯೂ ಅನಿವಾರ್ಯವಾಗಿದೆ. ಯುದ್ಧ ವೇಳೆಯಲ್ಲೂ ಕಷ್ಟ ಕಾಲದಲ್ಲಿಯೂ ಅದೇ ರೀತಿ ರೋಗದ ಕಾಲದಲ್ಲಿಯೂ ಸಹ ನಮಾಝ್ ಅನುಷ್ಠಿಸುವುದು ಆವಶ್ಯಕವಾಗಿದೆ. ಕೆಲವು ಸಂದರ್ಭಗಳಲ್ಲಿ ನಮಾಝನ್ನು ಕುಳಿತುಕೊಂಡು, ಮಲಗಿಕೊಂಡು ಅನುಷ್ಠಿಸಬೇಕೆಂದು ಆಜ್ಞಾಪಿಸಲಾಗಿದೆ. ಯುದ್ಧ ಕಾಲದಲ್ಲಿ ಮತ್ತು ಪ್ರಯಾಣದ ಕಾಲದಲ್ಲಿ ಖಸ್ರ್ ಮಾಡಿ ಅನುಷ್ಠಿಸಬಹುದು. ಅಂದರೆ ಎಲ್ಲ ಪರಿಸ್ಥಿತಿಗಳಲ್ಲೂ ನಮಾಝ್ ಅನುಷ್ಠಿಸುವುದು ಅವಶ್ಯಕವಾಗಿದೆ. ಸಾಮಾನ್ಯ ಪರಿಸ್ಥಿತಿಗಳಲ್ಲಿ ಪುರುಷರು ಮಸ್‌ಜಿದ್‌ಗಳಲ್ಲಿ ಸಾಮೂಹಿಕವಾಗಿ ನಮಾಝ್ ಅನುಷ್ಠಿಸಬೇಕು. ಮಹಿಳೆಯರು ಸಹ ನಿಗದಿತ ಸಮಯದಲ್ಲಿಯೇ ನಮಾಝ್ ಅನುಷ್ಠಿಸಬೇಕೆಂದು ಆಜ್ಞೆ ನೀಡಲಾಗಿದೆ. ಆದರೆ ಶೈತಾನನು ಒಂದು ಲೌಕಿಕ ಕಾರ್ಯಕ್ರಮದ ಆಶೆ ನೀಡಿ ನಮಾಝ್‌ನಿಂದ ದೂರ ಸರಿಸುತ್ತಾನೆ. ಕೆಲವು ಮನೆಗಳಲ್ಲಿ ಅಶಾಂತಿ ಇರುವುದರ ಕಾರಣವೇನೆಂದರೆ ಗಂಡಸರು ಪತ್ನಿಯ ಹಕ್ಕುಗಳನ್ನೂ ಈಡೇರಿಸಿಕೊಡುವುದಿಲ್ಲ ಮತ್ತು ಮಕ್ಕಳ ಹಕ್ಕುಗಳನ್ನೂ ಈಡೇರಿಸಿಕೊಡುವುದಿಲ್ಲ. ಏಕೆಂದರೆ ಪತಿ ಟಿ.ವಿ. ಮತ್ತು ಇಂಟರ್‌ನೆಟ್‌ನಲ್ಲಿ ನಿರರ್ಥಕ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಾ ಇರುತ್ತಾನೆ. ಅಹ್ಮದಿಯರ ಮನೆಗಳು ಈ ಎಲ್ಲ ರೋಗಗಳಿಂದ ರಕ್ಷಣೆ ಪಡೆಯಲು ಪ್ರಯತ್ನಿಸಬೇಕು.

ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶೈತಾನನ ಆಕ್ರಮಣದಿಂದ ಸತ್ಯವಿಶ್ವಾಸಿಗಳು ರಕ್ಷಣೆ ಹೊಂದಲು ಈ ಪ್ರಾರ್ಥನೆ ಕಲಿಸಿದ್ದಾರೆ. ಓ ಅಲ್ಲಾಹ್ ನಮ್ಮ ಹೃದಯಗಳಲ್ಲಿ ನಿನ್ನ ಬಗ್ಗೆ ಪ್ರೀತಿಯನ್ನು ಹುಟ್ಟಿಸು. ನಮ್ಮನ್ನು ಸುಧಾರಣೆ ಮಾಡು. ನಮ್ಮನ್ನು ಸುರಕ್ಷಿತ ಮಾರ್ಗದಲ್ಲಿ ಚಲಾಯಿಸು. ನಮ್ಮನ್ನು ಅಂಧಕಾರದಿಂದ ಪ್ರಕಾಶದ ಕಡೆಗೆ ಕರೆದುಕೊಂಡು ಹೋಗು. ನಮ್ಮನ್ನು ಬಾಹ್ಯ ಮತ್ತು ಆಂತರಿಕ ಅಶ್ಲೀಲತೆಗಳಿಂದ ರಕ್ಷಿಸು. ನಮ್ಮ ಕಿವಿಗಳಲ್ಲೂ ನಮ್ಮ ಕಣ್ಣುಗಳಲ್ಲೂ ನಮ್ಮ ಪತ್ನಿಯರಲ್ಲಿಯೂ ನಮ್ಮ ಮಕ್ಕಳಲ್ಲೂ ಅನುಗ್ರಹವನ್ನು ನಮಗೋಸ್ಕರ ಇರಿಸು. ನಮ್ಮ ಕಡೆಗೆ ಕಾರುಣ್ಯಭರಿತನಾಗಿ ಮರಳು. ನಿಶ್ಚಯವಾಗಿಯೂ ನೀನೇ ತೌಬ ಸ್ವೀಕರಿಸುವವನಾಗಿರುವೆ. ನೀನೇ ಪದೇ ಪದೇ ದಯೆ ದೋರುವವನಾಗಿರುವೆ. ನಮಗೆ ನೀನು ನೀಡಿದ ಅನುಗ್ರಹಗಳಿಗೆ

ಕೃತಜ್ಞತೆ ಅರ್ಪಿಸುವವರೂ ಮತ್ತು ಸ್ಮರಿಸುವವರೂ ನಾವು ಆಗುವಂತೆ ಮಾಡು. ಅವುಗಳನ್ನು ನೀನು ಅಂಗೀಕರಿಸು. ನಮ್ಮ ಮೇಲೆ ನಿನ್ನ ಅನುಗ್ರಹಗಳನ್ನು ಪರಿಪೂರ್ಣಗೊಳಿಸು. ಈ ಪ್ರಾರ್ಥನೆ ಲೌಕಿಕವಾದ ತಪ್ಪು ರೀತಿಯ ಆನಂದ ಪ್ರಾಪ್ತಿಯನ್ನು ತಡೆಯಲಿಕ್ಕಾಗಿದೆ. ಎಲ್ಲ ರೀತಿಯ ನಿರರ್ಥಕ ವಿನೋದಗಳನ್ನು ತಡೆಯಲಿಕ್ಕಾಗಿದೆ. ಮತ್ತು ಶೈತಾನನ ಆಕ್ರಮಣವನ್ನು ತಡೆಯಲಿಕ್ಕಾಗಿದೆ.

ಅಲ್ಲಾಹನು ನಮಗೆ ಎಂ.ಟಿ.ಎ. ಒದಗಿಸಿದ್ದಾನೆ. ಜಮಾಅತಿನ ಆಧ್ಯಾತ್ಮಿಕ ಜ್ಞಾನ ವರ್ಧಿಸಲು ಇಂಟರ್‌ನೆಟ್ ವೆಬ್‌ಸೈಟ್ ಸಹ ನೀಡಿದ್ದಾನೆ. ನಾವು ನಮ್ಮ ಗಮನವನ್ನು ಇವುಗಳ ಕಡೆಗೆ ಸರಿಸಿದರೆ ನಮ್ಮ ಗಮನ ಅದರ ಕಡೆಗೆಯೇ ಇರುವುದು. ನಾವು ಅಲ್ಲಾಹನ ಸಾಮೀಪ್ಯ ಗಳಿಸುವವರಾಗುವೆವು ಮತ್ತು ಶೈತಾನನಿಂದ ರಕ್ಷಣೆ ಪಡೆಯುವವರಾಗುವೆವು. ಪ್ರತಿಯೊಂದು ಅಹ್ಮದಿ ಮನೆಗೆ ಅನಿವಾರ್ಯವಾದುದೇನೆಂದರೆ ಮನೆಯಲ್ಲಿರುವ ಎಲ್ಲರೂ ಸೇರಿ ಪ್ರತಿವಾರ ಕನಿಷ್ಠಪಕ್ಷ ಎಂ.ಟಿ.ಎ ಮೂಲಕ ಖುತ್‌ಬ ಆವಶ್ಯಕವಾಗಿ ಆಲಿಸಬೇಕು. ಇದಲ್ಲದೆ ಪ್ರತಿದಿನ ಕನಿಷ್ಠ ಒಂದು ಗಂಟೆ ಎಂ.ಟಿ.ಎ'ದ ಬೇರೆ ಕಾರ್ಯಕ್ರಮಗಳನ್ನು ನೋಡಬೇಕು. ಹೀಗೆ ಮಾಡಿದರೆ ಖಂಡಿತವಾಗಿಯೂ ನಮಗೆ ಅಲ್ಲಾಹನು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಲಿಸಿದ ಪ್ರಾರ್ಥನೆಯಲ್ಲಿ ಹೇಳಲಾದ ಧಾರ್ಮಿಕ ಲಾಭ ಸಿಗುವುದು. ಮತ್ತು ಶೈತಾನನಿಂದಲೂ ದೂರ ಸರಿಯುವಿಕೆ ಸಂಭವಿಸುವುದು. ಅಲ್ಲಾಹನ ಸಾಮೀಪ್ಯ ಗಳಿಸುವ ಬಗ್ಗೆ ನೀವು ಲಕ್ಷ್ಯ ನೀಡುವಿರಿ. ಮನೆಗಳಲ್ಲಿ ಸಮಾಧಾನ ಸ್ಥಾಪಿತವಾಗುವುದು. ಅದರಿಂದ ಅನುಗ್ರಹವೂ ದೊರಕುವುದು.

ತಂದೆ ತಾಯಂದಿರು ತಮ್ಮ ಮಕ್ಕಳನ್ನು ಮಸ್‌ಜಿದ್‌ನೊಂದಿಗೆ ಜೋಡಿಸುವುದು ಅವರ ಕಡ್ಡಾಯ ಕರ್ತವ್ಯ ಆಗಿದೆ. ಖುದ್ದಾಮುಲ್ ಅಹ್ಮದಿಯಾ, ಅತ್‌ಫಾಲುಲ್ ಅಹ್ಮದಿಯಾ, ನಾಸೀರಾತುಲ್ ಅಹ್ಮದಿಯಾ ಮೊದಲಾದವುಗಳಲ್ಲಿ ಮಕ್ಕಳು ಭಾಗವಹಿಸುವಂತೆ ಮಾಡಬೇಕು. ಇಲ್ಲಿ ನಾನು ಜಮಾಅತಿನ ನಿಝಾಮ್‌ನೊಂದಿಗೆ ಆವಶ್ಯಪಡುತ್ತೇನೆ. ಅತ್‌ಫಾಲ್ ಮತ್ತು ಖುದ್ದಾಮ್‌ಗಳನ್ನು ಸಂರಕ್ಷಿಸುವುದು ಆವಶ್ಯಕವಾಗಿದೆ. ನಾಸಿರಾತ್‌ಗಳನ್ನೂ ಯುವತಿಯರಾದ ಲಜ್‌ನ ಸದಸ್ಯರನ್ನೂ ಸಂರಕ್ಷಿಸುವುದು ಸಹ ಆವಶ್ಯಕವಾಗಿದೆ. ಅಧೀನ ಸಂಘಟನೆಗಳು ತಮ್ಮ ಸದಸ್ಯರನ್ನು ಜಮಾಅತ್‌ನೊಂದಿಗೆ ಬಲವಾಗಿ ಜೋಡಿಸಿರುವಂತೆ ಮಾಡುವುದು ಅವರ ಹೊಣೆಗಾರಿಕೆಯಾಗಿದೆ. ಖುದ್ದಾಮ್ ವಿವಿಧ ಗುಂಪುಗಳನ್ನು ರಚಿಸಿ ವಿವಿಧ ಮನೋಭಾವಗಳ ಯುವ ಜನರನ್ನು ತಮ್ಮೊಂದಿಗೆ ಜೋಡಿಸುವಂತೆ ಮಾಡಬೇಕು. ಹುದ್ದೇದಾರರು ಎಂತಹ ಮನೋಭಾವ ಹೊಂದಬೇಕೆಂದರೆ ಪ್ರೀತಿಯಿಂದ ಅವರೊಂದಿಗೆ ವರ್ತಿಸಿ ಮಸ್‌ಜಿದ್‌ನೊಂದಿಗೆ ಅವರನ್ನು ಜೋಡಿಸುವಂತೆ ಮಾಡಬೇಕು.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿರುವುದು ಏಕೆಂದರೆ ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಶೈತಾನನ ವಿರುದ್ಧ ಅಂತಿಮ ಹೋರಾಟ ನಡೆಸಲಿಕ್ಕಾಗಿದೆ. ಆದರೆ ನಾವು ನಮ್ಮ ಕೆಲಸಗಳ ಮೂಲಕ ಶೈತಾನನಿಗೆ ಸಂದರ್ಭ ನೀಡಿದರೆ, ನಮ್ಮ ಮಕ್ಕಳನ್ನು ಮತ್ತು ಯುವಕರನ್ನು ಹುದ್ದೇದಾರರ ವರ್ತನೆಗಳ ಕಾರಣದಿಂದ ಶೈತಾನನು ಸಹಾನುಭೂತಿ ತೋರಿಸಿ ತನ್ನ ಅಧೀನರಾಗುವಂತೆ ಮಾಡುವುದಾದರೆ, ಅಂತಹ ಹುದ್ದೇದಾರರು, ಪುರುಷರಾಗಿರಲಿ ಮಹಿಳೆಯರಾಗಿರಲಿ, ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಯಕರಲ್ಲ; ಅವರು ಶೈತಾನನ ಸಹಾಯಕರಾಗಿದ್ದಾರೆ. ಆದುದರಿಂದ ಪ್ರತಿಯೊಬ್ಬ ಹುದ್ದೇದಾರ ವಿಶಿಷ್ಟವಾಗಿ ಪ್ರಯತ್ನಿಸಬೇಕು. ಪ್ರತಿಯೊಬ್ಬನು ತನ್ನನ್ನು ಶೈತಾನನ ಆಕ್ರಮಣದಿಂದ ರಕ್ಷಿಸಲು ಪ್ರಯತ್ನಿಸಬೇಕು ಮತ್ತು ಜಮಾಅತಿನ ಸದಸ್ಯರನ್ನು ಸಹ ರಕ್ಷಿಸಬೇಕು.

ಒಟ್ಟಿನಲ್ಲಿ, ಅಲ್ಲಾಹನು ನೀಡಿದ ಅನುಗ್ರಹಗಳನ್ನು ಮನವರಿಕೆ ಮಾಡಿಕೊಳ್ಳುವ ಆವಶ್ಯಕತೆ ಇದೆ. ಅಲ್ಲಾಹನ ಸಂಪ್ರೀತಿ ಗಳಿಸುವ ಆವಶ್ಯಕತೆ ಇದೆ. ಪ್ರತಿಯೊಬ್ಬ ಪ್ರಜ್ಞಾವಂತ ವಿವೇಕಶಾಲಿ ಅಹ್ಮದಿ ಯುವಕ ಮತ್ತು ಯುವತಿ ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬೇಕಾದುದೇನೆಂದರೆ ಅಲ್ಲಾಹನು ವಿಶಿಷ್ಟ ಅನುಗ್ರಹ ನೀಡಿ ನಮಗೆ ಅಹ್ಮದಿಯ್ಯತ್ತನ್ನು ಸ್ವೀಕರಿಸುವ ಭಾಗ್ಯ ನೀಡಿದನು. ಅಥವಾ ಅಹ್ಮದಿ ಮನೆಯಲ್ಲಿ ಜನಿಸುವಂತೆ ಮಾಡಿದನು. ಆದುದರಿಂದ ಪ್ರತಿಯೊಬ್ಬ ಅಹ್ಮದಿ ತನ್ನ ದೊಡ್ಡವರ ಅಥವಾ ಹಿರಿಯರೆಂದು ಹೇಳಿಕೊಳ್ಳುವವರ ಅಥವಾ ಹುದ್ದೇದಾರರ ವರ್ತನೆಯ ಕಾರಣದಿಂದ ತನ್ನನ್ನು ಧರ್ಮದಿಂದ ದೂರಕ್ಕೆ ಕರೆದುಕೊಂಡು ಹೋಗಬಾರದು. ಅವರು ಶೈತಾನನನ್ನು ಸೋಲಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಯಕರಾಗಬೇಕು. ಮತ್ತು ಅದಕ್ಕೋಸ್ಕರ ಅಲ್ಲಾಹನಲ್ಲಿ ಪ್ರಾರ್ಥಿಸಬೇಕು.

ಇದೇ ರೀತಿ ವಿಶಿಷ್ಟವಾಗಿ ಯಾರಿಗೆ ಧಾರ್ಮಿಕ ಸೇವೆ ಮಾಡುವ ಕೆಲಸ ವಹಿಸಿಕೊಡಲಾಗಿದೆಯೋ ಜಮಾಅತಿನ ವ್ಯಕ್ತಿಗಳಿಗೆ ಮಾರ್ಗದರ್ಶನ ಮತ್ತು ತರಬೇತಿ ನೀಡುವ ಕೆಲಸ ಯಾರಿಗೆ ವಹಿಸಿಕೊಡಲಾಗಿದೆಯೋ ಅವರು ತಮ್ಮ ಮಾತು ಮತ್ತು ಕೃತ್ಯಗಳನ್ನು ಅಲ್ಲಾಹನ ಸಂಪ್ರೀತಿ ಗಳಿಸುವ ರೀತಿಯಲ್ಲಿ ಪರಿವರ್ತಿಸಲು ಪ್ರಯತ್ನಿಸಬೇಕು. ಮತ್ತು ಅಲ್ಲಾಹನೊಂದಿಗೆ ನಿಷ್ಠೆಯಿಂದ ಪ್ರಾರ್ಥಿಸಬೇಕು. ತಮ್ಮ ಕಾರಣದಿಂದ ಯಾರನ್ನಾದರೂ ಅಲ್ಲಾಹನು ಶೈತಾನನ ಜೋಳಿಗೆಗೆ ಹಾಕದಂತಾಗಲಿ ಎಂದು ಪ್ರಾರ್ಥಿಸಬೇಕು. ಯಾವುದೇ ವ್ಯಕ್ತಿ ಯಾವುದೇ ರೀತಿಯಲ್ಲಿ ಶೈತಾನನ ಹಿಂದೆ ಚಲಿಸುವವನಾಗಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಸ್ತಿಗ್‌ಫಾರ್ ಬಗ್ಗೆ ಗಮನ ಸೆಳೆಯುತ್ತಾ ಒಂದು ಸ್ಥಳದಲ್ಲಿ ಹೇಳುತ್ತಾರೆ: ಅಲ್ಲಾಹನು ಎಲ್ಲ ಸಂದರ್ಭಗಳಲ್ಲೂ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುವ ವ್ಯವಸ್ಥೆ ಮಾಡಿಸಿದ್ದಾನೆ. ಮನುಷ್ಯನು ಪ್ರತಿಯೊಂದು ಪಾಪಕ್ಕೋಸ್ಕರ ಅದು ಬಾಹ್ಯವಾಗಿರಲಿ, ಆಂತರಿಕವಾಗಿರಲಿ, ಅವನಿಗೆ ಅದರ ಬಗ್ಗೆ ತಿಳಿದಿದ್ದರೂ ತಿಳಿಯದೆ ಇದ್ದರೂ, ಕೈ, ಕಾಲು, ನಾಲಗೆ, ಮೂಗು, ಕಿವಿ ಮತ್ತು ಕಣ್ಣು ಇವುಗಳ ಎಲ್ಲ ವಿಧಗಳ ಪಾಪದೋಷಗಳ ಬಗ್ಗೆ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ ಇರಬೇಕು. ಇಂದಿನ ಕಾಲದಲ್ಲಿ ಹಝ್ರತ್ ಆದಮ್ ಅಲೈಹಿಸ್ಸಲಾಮರ ಪ್ರಾರ್ಥನೆ ಮಾಡಬೇಕು. رَبَّنَا ظَلَمْنَا أَنفُسَنَا وَإِنْ لَمْ تَغْفِرْ لَنَا وَتَرْحَمْنَا لَنَكُونَنَّ مِنَ الْخَاسِرِينَ 'ನಮ್ಮ ಪ್ರಭೂ, ನಾವು ನಮ್ಮ ಜೀವಗಳ ಮೇಲೆಯೇ ದೌರ್ಜನ್ಯ ಮಾಡಿರುವೆವು. ನೀನು ನಮ್ಮನ್ನು ಕ್ಷಮಿಸದಿದ್ದರೆ ಮತ್ತು ನಮ್ಮ ಮೇಲೆ ದಯೆದೋರದಿದ್ದರೆ ನಾವು ನಷ್ಟವನ್ನು ಅನುಭವಿಸುವವರಲ್ಲಿ ಸೇರುವೆವು.

ಇನ್ನೊಂದು ಸ್ಥಳದಲ್ಲಿ ನಮಗೆ ಉಪದೇಶ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಪ್ರಿಯ ಬಂಧುಗಳೇ, ನೀವು ಅಲ್ಲಾಹನ ಆಜ್ಞೆಗಳನ್ನು ನಿರ್ಲಕ್ಷಿಸಬೇಡಿರಿ. ಇಂದಿನ ಕಾಲದ ಫಿಲಾಸಫಿಯ ವಿಷ ನಿಮ್ಮ ಮೇಲೆ ಪ್ರಭಾವ ಬೀರದಿರಲಿ. ನೀವು ಒಬ್ಬ ಮಗುವಿನ ಹಾಗೆ ಆಗಿ ಅಲ್ಲಾಹನ ಆಜ್ಞೆಗಳ ಅಡಿಯಲ್ಲಿ ಚಲಿಸಿರಿ.

ನೀವು ನಮಾಝ್ ಅನುಷ್ಠಿಸಿರಿ, ನೀವು ನಮಾಝ್ ಅನುಷ್ಠಿಸಿರಿ. ಅದು ಎಲ್ಲ ಶಕ್ತಿಗಳ ಕೀಲಿಗೈ ಆಗಿದೆ. ನೀವು ನಮಾಝಿಗೆ ನಿಲ್ಲುವಾಗ ನೀವು ಒಂದು ಆಚಾರ ಕರ್ಮ ನಿರ್ವಹಿಸುವುದಾಗಿ ಭಾವಿಸಬಾರದು. ನಮಾಝ್‌ಗೆ ಮೊದಲು ಬಾಹ್ಯವಾಗಿ ವುಝು ಮಾಡುವ ಹಾಗೆ ಆಂತರಿಕ ವುಝು ಸಹ ಮಾಡಿರಿ. ನಿಮ್ಮ ಅಂಗಾಂಗಗಳನ್ನು ಏಕದೇವನಿಗೆ ಹೊರತಾದವರ ಯೋಚನೆಯಿಂದ ತೊಳೆದು ಬಿಡಿರಿ. ಆಗ ನೀವು ಇಬ್ಬಗೆಯ ವುಝು ಮಾಡಿ ನಿಲ್ಲುವವರಾಗುವಿರಿ. ನಮಾಝ್‌ನಲ್ಲಿ ಬಹಳ ಪ್ರಾರ್ಥನೆ ಮಾಡಿರಿ. ನೀವು ನಮಾಝ್‌ನಲ್ಲಿ ಅಳುವುದನ್ನು ನಿಮ್ಮ ಅಭ್ಯಾಸವಾಗಿ ಮಾಡಿಕೊಳ್ಳಿರಿ. ಆ ಮೂಲಕ ನಿಮ್ಮ ಮೇಲೆ ದಯೆದೋರಿಸಲ್ಪಡುವಂತೆ ಆಗಲಿ. ಸತ್ಯವನ್ನು ಅವಲಂಬಿಸಿರಿ. ಸತ್ಯವನ್ನು ಅವಲಂಭಿಸಿರಿ. ಅಲ್ಲಾಹನು ನಿಮ್ಮನ್ನು ನೋಡುತ್ತಾ ಇದ್ದಾನೆ. ಪ್ರತಿಯೊಂದು ವ್ಯವಹಾರಕ್ಕೆ ಸಂಬಂಧಿಸಿ ಯಾವಾಗಲೂ ಸತ್ಯವನ್ನು ಅವಲಂಬಿಸಿರಿ. ಪ್ರತಿಯೊಂದು ಕೆಲಸ ಮಾಡುವಾಗಲೂ ಅಲ್ಲಾಹನು ನನ್ನನ್ನು ನೋಡುತ್ತಾನೆ ಎಂದು ಯೋಚಿಸಿರಿ. ನಿಮ್ಮ ಹೃದಯ ಹೇಗಿದೆ ಎಂದು ಅಲ್ಲಾಹನು ನೋಡುತ್ತಿದ್ದಾನೆ. ಏನು, ಮನುಷ್ಯನು ಅಲ್ಲಾಹನಿಗೆ ಮೋಸ ಮಾಡಲು ಸಾಧ್ಯವೇ? ಅವನ ಮುಂದೆ ಕುತಂತ್ರಗಳನ್ನು ಮಾಡಲು ಸಾಧ್ಯವೇ? ಅತ್ಯಂತ ದುರದೃಷ್ಟಶಾಲಿ ವ್ಯಕ್ತಿ ತನ್ನ ಕೆಟ್ಟ ಕೆಲಸಗಳನ್ನು ಎಷ್ಟರ ಮಟ್ಟಿಗೆ ತಲಪಿಸುತ್ತಾನೆಂದರೆ ಅಲ್ಲಾಹನು ಇಲ್ಲವೇ ಇಲ್ಲ ಎಂಬಂತೆ. ಆಗ ಅವನು ಬಹಳ ಬೇಗನೆ ನಾಶಗೊಳಿಸಲ್ಪಡುತ್ತಾನೆ. ಅಲ್ಲಾಹನಿಗೆ ಅವನ ಬಗ್ಗೆ ಯಾವ ಪರಿವೆಯೂ ಇರುವುದಿಲ್ಲ.

ಬಂಧುಗಳೇ, ಈ ಲೋಕದ ತರ್ಕಶಾಸ್ತ್ರ ಒಂದು ಶೈತಾನ್ ಆಗಿದೆ. ಈ ಲೋಕದ ಬರಿದಾದ ಫಿಲಾಸಫಿ ಒಂದು ಇಬ್ಲೀಸ್ ಆಗಿದೆ. ತರ್ಕಶಾಸ್ತ್ರ, ಲಾಜಿಕ್ ಮೊದಲಾದುವು ಶೈತಾನೀ ವಿಷಯಗಳಾಗಿವೆ. ನೀವು ತರ್ಕಶಾಸ್ತ್ರ ಮತ್ತು ಫಿಲಾಸಫಿಯನ್ನು ಮಾತ್ರ ಅವಲಂಬಿಸಿದರೆ ನಿಮ್ಮ ಸತ್ಯವಿಶ್ವಾಸದ ಪ್ರಕಾಶ ಕುಂದಿ ಹೋಗುವುದು. ಮತ್ತು ದೇವಭಯ ಇಲ್ಲದಾಗುವುದು. ಅಂತಹ ವ್ಯಕ್ತಿ ಮೆಲ್ಲ ಮೆಲ್ಲನೆ ನಾಸ್ತಿಕವಾದಕ್ಕೆ ಸಮೀಪವಾಗುತ್ತಾನೆ. ಆದುದರಿಂದ ನೀವು ಅವುಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ನೀವು ಎಂತಹ ಹೃದಯ ಹೊಂದಬೇಕೆಂದರೆ ಅದು ವಿನಯಾನ್ವಿತವಾಗಿರಬೇಕು. ನೀವು ಯಾವುದೇ ಆಕ್ಷೇಪ ಸೂಚಿಸದೆ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವರಾಗಬೇಕು. ಮಗು ತನ್ನ ತಾಯಿಯ ಮಾತುಗಳನ್ನು ಒಪ್ಪಿ ನಡೆಯುವ ಹಾಗೆ ಆಗಬೇಕು. ಪವಿತ್ರ ಖುರ್‌ಆನಿನ ಉಪದೇಶಗಳು ಮನುಷ್ಯನನ್ನು ತಖ್ವದ ಉನ್ನತ ಪದವಿಗಳಿಗೆ ತಲಪಿಸುತ್ತವೆ. ಅವುಗಳ ಕಡೆಗೆ ಕಿವಿಗೊಡಿರಿ ಮತ್ತು ಅವುಗಳಿಗೆ ಅನುಯೋಜ್ಯವಾಗಿ ನಿಮ್ಮನ್ನು ಮಾಡಿಕೊಳ್ಳಿರಿ.

ಅಲ್ಲಾಹನು ನಮ್ಮನ್ನು ಶೈತಾನನ ಹೆಜ್ಜೆಗಳಿಂದ ಸದಾ ಸುರಕ್ಷಿತವಾಗಿಡಲಿ. ಅಲ್ಲಾಹನ ಮುಂದೆ ಬಾಗುತ್ತಾ ಅವನ ಸಹಾಯ ಬೇಡಿಕೊಳ್ಳುತ್ತಾ ಅವನ ಆಜ್ಞೆಗಳನ್ನು ಅನುಸರಿಸಿ ನಡೆಯುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ಪವಿತ್ರ ಖುರ್‌ಆನಿನ ಉಪದೇಶಗಳನ್ನು ಅನುಷ್ಠಾನಕ್ಕೆ ತರುವವರಾಗೋಣ. ಅಲ್ಲಾಹನು ಕಳುಹಿಸಿದ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ಭಾಗ್ಯ ಲಭಿಸಿದ್ದಕ್ಕಾಗಿ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸೋಣ. ಅವರು ಶೈತಾನನನ್ನು ಸೋಲಿಸುವವರಾಗಿದ್ದಾರೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡಿದ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸುವವರೂ ಶೈತಾನನ ಪ್ರತಿಯೊಂದು ಆಕ್ರಮಣವನ್ನು ನಿಷ್ಫಲಗೊಳಿಸುವವರೂ ಆಗುವಂತೆ ಅಲ್ಲಾಹನು ನಮಗೆ ಭಾಗ್ಯ ನೀಡಲಿ – ಆಮೀನ್.

————————————*****————————————

***Friday Sermon delivered by Hadrath Khaleefatul Masih Al Khamis*** *(atba)*

*at Masjid Nasir,Gotanburg, Sweden on 20-05-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon